ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ.282/2022

| | | |
|---|---|---|
| ಸಾಕ್ಷಿಯ ಹೆಸರುಃ | ತಿಪ್ಪೇಶ್ ಜಿ. | ಚಾಸಾಃ 14 |
| ತಂದೆಯ ಹೆಸರುಃ | ಗುರುಸಿದ್ಧಪ್ಪ | ಪ್ರಾಸಾಃ 9 |
| ವಯಸ್ಸುಃ | 42 ವರ್ಷ | |
| ಉದ್ಯೋಗಃ | ಮುಖ್ಯ ಪೇದೆ, ಕೊಪ್ಪ ವೃತ್ತ ಕಚೇರಿ | |
| ವಾಸಃ | ಕೊಪ್ಪ | |

ದಿನಾಂಕಃ07/03/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃಃ

ನಾನು ದಿನಾಂಕಃ16/09/2021 ರಿಂದ 13/08/2022 ರವರೆಗೆ ಹರಿಹರಪುರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕಃ20/03/2021 ರಂದು ನಾನು ಹಗಲು ಠಾಣಾ ಕರ್ತವ್ಯದಲ್ಲಿದ್ದಾಗ ಕೊಪ್ಪ ಸರ್ಕಾರಿ ಆಸ್ಪತ್ರೆಯ ಇಂಟಿಮೇಶನ್ ಪಡೆದು 2-20 ಕ್ಕೆ ಹಾಜರಾಗಿದ್ದು ಇಂಟೀಮೇಶನ್ ಪಡೆದು ನಂತರ ಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಗಾಯಾಳು ಚಾಸಾ 1 ರವರ ಹೇಳಿಕೆಯನ್ನು ಮದ್ಯಾಹ್ನ 3 ರಿಂದ 3-45 ರವರೆಗೂ ಪಡೆದಿರುತ್ತೇನೆ. ವಾಪಾಸು ಠಾಣೆಗೆ ಹಾಜರಾಗಿ ಹರಿಹರಪುರ ಠಾಣಾ ಮೊ. 16/2022, ಕಲಂ 271, 337 ರಂತೆ ಪ್ರಕರಣ ದಾಖಲು ಮಾಡಿ ಪ್ರ ವ. ವರದಿ ದಾಖಲಿಸಿರುತ್ತೇನೆ .

ನಂತರ 5 ಗಂಟೆಗೆ ಕೃತ್ಯ ನಡೆದಿದೆ ಎನ್ನಲಾದ ಸ್ಥಳ ಹರಿಹರಪುರದ ತಾಜ್ ಹೋಟೆಲ್ ನ ಮುಂಭಾಗ ಆಗುಂಬೆ - ಕೊಪ್ಪರಸ್ತೆಯಲ್ಲಿದ್ದ ಪಂಚಾಯತುದಾರರಾದ ಚಾಸಾ 2 ಹಾಗೂ ರ 3 ರವರ ಸಮಕ್ಷಮ 5-10 ರಿಂದ 6-00 ರವರೆಗೂ ಕೃತ್ಯ ನಡೆದಿದೆ ಎನ್ನಲಾದ ಸ್ಥಳ ವನ್ನು ಚಾಸಾ 1 ರವರು ತೋರಿಸಿದ ಮೇರೆಗೆ ಮಹಜರ್ ಕ್ರಮ

ಜರುಗಿಸಿರುತ್ತೇನೆ. ಮಹಜರ್ ಕಾಲದಲ್ಲಿ ಕೆಎ-35 ಬಿ 6610 ರ ಕಾರು ಕೆಎ 18 ಸಿ 1164 ರ ಪ್ಯಾಸೆಂಜರ್ ಆಟೋವನ್ನು ಐ ಎಂ ವಿ ವರದಿಗಾಗಿ ವಶಕ್ಕೆ ಪಡೆದಿರುತ್ತೇನೆ. ಮಹಜರ್ ಕಾಲದಲ್ಲಿ ಮೊಬೈಲ್ ನಲ್ಲಿ ಪೋಟೋ ತೆಗೆದಿರುತ್ತೇನೆ. ನಂತರ ವಶಕ್ಕೆ ಪಡೆದ ವಾಹನವನ್ನು ಮಾಲುಪಟ್ಟಿ 18/2022 ರಲ್ಲಿ ನೊಂದಾಯಿಸಿ ಅನುಮತಿ ಕೋರಿರುತ್ತೇನೆ.

ಅದೇ ದಿನ ಚಾಸಾ 7 ಮತ್ತು 8 ರವರನ್ನು ವಿಚಾರಿಸಿ ಅವರ ಹೇಳಿಕೆ ಪಡೆದಿರುತ್ತೇನೆ. ದಿ:21/03/2022 ರಂದು ಚಾಸಾ 5 , 6 ಹಾಗೂ 9 ರವರ ಹೇಳಿಕೆ ಪಡೆದಿರುತ್ತೇನೆ. ಮಹಜರ್ ಕಾಲದಲ್ಲಿ ತೆಗೆದ ಪೊಟೋಗಳನ್ನು ಸಿಡಿಗೆ ಅಳವಡಿಸಿ 65 ಬಿ ದೃಢೀಕರಣ ನೀಡಿರುತ್ತೇನೆ, ದಿ:25/03/2022 ರಂದು ಆಟೋ ದಾಖಲಾತಿ ಪರಿಶೀಲಿಸಿ ಇಂಡೆಮ್ನಿಟಿ ಬಾಂಡ್ ಪಡೆದು ಮಾಲೀಕರ ವಶಕ್ಕೆ ನೀಡಿರುತ್ತೇನೆ. ದಿ:29/04/2022 ರಂದು ನ್ಯಾಯಾಲಯದ ಆದೇಶದಂತೆ ಕೇಎ-35 ಬಿ 6610 ಸ್ವಿಫ್ಟ್ ಕಾರನ್ನು ಮಾಲೀಕರ ವಶಕ್ಕೆ ನೀಡಿರುತ್ತೇನೆ.

ದಿ:29/04/2022 ರಂದು ಠಾಣಾ ಆವರಣದಲ್ಲಿ ನ್ಯಾಯಾಲಯದ ಆದೇಶದಂತೆ ಸಾಕ್ಷಿದಾರರಾದ ದಿಲಾವರ್ ಬಿನ್ ಪಜುಲಕ್‌ರವರ ಸಮಕ್ಷಮ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ.

ದಿ:03/04/2022 ರಂದು ಚಾಸಾ 4 ರವರ ಗಾಯಾಳು ಹೇಳಿಕೆ ಪಡೆದಿರುತ್ತೇನೆ.

ದಿ:25/04/2022 ರಂದು ಚಾಸಾ 13 ರವರಿಂದ ಐಎಂ ವಿ ವರದಿ ಪಡೆದಿರುತ್ತೇನೆ.

ದಿ:07/05/2022 ರಂದು ಚಾಸಾ 4 ರವರ ನಂಜಪ್ಪ ಆಸ್ಪತ್ರೆಯಿಂದ ಬಂದ ಗಾಯದ ಪ್ರಮಾಣಪತ್ರವನ್ನು ಪಡೆದಿರುತ್ತೇನೆ. ದಿ:19/05/2022 ರಂದು ಕೊಪ್ಪ ಪ್ರಶಮನಿ ಆಸ್ಪತ್ರೆಯಿಂದ ಚಾಸಾ 4 ರವರ ಗಾಯದ ಪ್ರಮಾಣಪತ್ರ ಪಡೆದಿರುತ್ತೇನೆ.

ದಿ:06/04/2022 ರಂದು ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.

ನಂತರ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ ನ್ಯಾಯಾಲಯಕ್ಕೂ ಹಾಗೂ ನನ್ನ ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ.

ನಿಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದೂ , ನಿಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದೂ, ನಿಪಿ.3 ರಿಂದ 5 ಪೊಟೋಗಳನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ನಿಪಿ.8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದೂಾ , ನಿಪಿ.9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಬಿ) ಎಂದೂ, ನಿಪಿ.10 ರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ.10(ಬಿ) ಎಂದೂ, ಪ್ರಥಮ ವರ್ತಮಾನ ವರದಿಯನ್ನು ನಿಪಿ.11, ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದೂ, 65 ಕಲಂ ದೃಢೀಕರಣವನ್ನು ನಿಪಿ.12 , ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದೂ, ಗಾಯದ ಪ್ರಮಾಣಪತ್ರವನ್ನು ನಿಪಿ.13, ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದೂ, ಐ ಎಂ ವಿ ವರದಿಯನ್ನು ನಿಪಿ.14, ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದೂ, ಇಂಡೆಮ್ನಿಟಿ ಬಾಂಡನ್ನು ನಿಪಿ.15, ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದೂ, ವಾಹನ ಬಿಡುಗಡೆ ಮಹಜರನ್ನು ನಿಪಿ.16 , ಸಾಕ್ಷಿಯ ಸಹಿಯನ್ನು ನಿಪಿ.16(ಎ) ಹಾಗೂ ಒಂದು ಪೋಟೋವನ್ನು ನಿಪಿ.17 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಂ ಎನ್ ಎಸ್., ವಕೀಲರಿಂದಃಃ

ಪ್ರಸ್ತುತ ಪ್ರಕರಣದಲ್ಲಿ ಪ್ರ. ವ. ವರದಿಯನ್ನು ನಾನೇ ಸಲ್ಲಿಸಿರುತ್ತೇನೆ ಹಾಗೂ ದೋಷಾರೋಪಣ ಪತ್ರವನ್ನು ನಾನೇ ಸಲ್ಲಿಸಿರುತ್ತೇನೆ. ಕೊಪ್ಪ ಠಾಣೆಯವರು ನನಗೆ ಮಾಹಿತಿ ತಿಳಿಸಿದ್ದು ನಾನು ಕೊಪ್ಪ ಠಾಣೆಗೆ ಬಂದು ಮಾಹಿತಿಯನ್ನು ಪಡೆದಿರುತ್ತೇನೆ.

ಕೊಪ್ಪ ಠಾಣೆಯಿಂದ ನಾನು ನೇರವಾಗಿ ಕೊಪ್ಪ ಆಸ್ಪತ್ರೆಗೆ ಹೋಗಿರುತ್ತೇನೆ. ಮಹಜರ್ ಕಾಲಕ್ಕೆ ವಾಹನಗಳು ಸ್ಥಳದಲ್ಲೇ ಇದ್ದವು. ಸದರಿ ವಾಹನಗಳು ನಿಂತಿದ್ದರಿಂದ ಹೆದ್ದಾರಿಯಲ್ಲಿ ಇತರ ವಾಹನಗಳು ಓಡಾಡಲು ತೊಂದರೆ ಇರಲಿಲ್ಲ. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾನು ಹೋದಾಗ ತಾಜ್ ಹೋಟೆಲ್ ನ ಎದುರಿನ ರಸ್ತೆಯ ಎಡಬಾಗದಲ್ಲಿ ವಾಹನ ನಿಂತಿತ್ತು. ಆಟೋ ನಿಲುವಾಗಿಲು ಕಡೆಯಿಂದ ಹರಿಹರಪುರಕ್ಕೆ ಬರುವಾಗ ರಸ್ತೆಯ ಎಡಬಾಗದಲ್ಲಿದ್ದ ಮೈದಾನದಲ್ಲಿ ಬಿದ್ದಿತ್ತು ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ಸದರಿ ಆಟೋವನ್ನು ಎತ್ತಿ ನಿಲ್ಲಿಸಿದ್ದರು. ಅಪಘಾತ ನಡೆಯಿತು ಎನ್ನಲಾದ ಸ್ಥಳ ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿ. ತಾಜ್ ಹೋಟೆಲ್ ನ ಎದುರು ರಸ್ತೆ ನೇರವಾಗಿದ್ದು ಮುಂದೆ ಸುಮಾರು 15 ಅಡಿ ಮುಂದೆ ತಿರುವು ಇರುತ್ತದೆ. ಗ ನಿಲುವಾಗಿಲಿನಿಂದ ಅಪಘಾತ ನಡೆಯಿತು ಎನ್ನಲಾದ ಸ್ಥಳದಲ್ಲಿ ನಿಲುವಾಗಿಲಿನಿಂದ ಬರಬೇಕಾದರೆ ಬಲಬಾಗಕ್ಕೆ ತಿರುಗಬೇಕಾಗುತ್ತದೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿದ್ದೆ ಎಂದಾಗ ಸುಮಾರು 5-6 ಜನ ಇದ್ದರು. ಅಪಘಾತ ನಡೆಯಿತು ಎನ್ನಲಾದ ಸುಮಾರು 5 ಗಂಟೆಯ ನಂತರ ನಾವು ಹೊಗಿದ್ದೆವು. ಆ ಸಮಯದಲ್ಲಿ ಆಟೋ ಮಾಲಿಕರು ಸ್ಥಳದಲ್ಲಿ ಇದ್ದರು.

ಅಪಘಾತ ಆಯಿತು ಎನ್ನಲಾದ ನಂತರ ಸದರಿ ಕಾರಿನ ಚಾಲಕ ಪೋಲಿಸ್ ಠಾಣೆಗೆ ಬಂದಿದ್ದರು. ಸದರಿ ಕಾರಿನ ಚಾಲಕ ಅಪಘಾತವು ಆಟೋ ಚಾಲಕನ ತಪ್ಪಿಂದ ಆಗಿರುತ್ತದೆ ಎಂದು ದೂರು ನೀಡಲು ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪಿ ಎಸ್ ಐ ಯಾರಾಗಿದ್ದರು ಎಂದು ನನಗೆ ನೆನಪಿಲ್ಲ.

ಮಹಜರಿನಲ್ಲಿ ರಸ್ತೆ ಎಡಬಾಗಕ್ಕೆ ಕಾರು ಇತ್ತು ಎಂದು ನಾನು ನಮೂದು ಮಾಡಿರುತ್ತೇನೆ. ನಡೆದಿದೆ ಎನ್ನಲಾದ ಅಪಘಾತವು ಸದರಿ ವಾಹನಗಳು ಮುಖಾಮುಖಿಯಾಗಿ ಆಗಿರುವುದಿಲ್ಲ ಎಂದರೆ ಸರಿ.

ತಾಜ್ ಹೋಟೆಲ್ ನ ಹತ್ತಿರ ಬಲಬಾಗದಲ್ಲಿ ಸುಮಾರು 15 ಅಡಿ ರಸ್ತೆ ಇತ್ತು ಎಂದರೆ ಸರಿ. ಒಂದು ವೇಳೆ ನನ್ನ ತನಿಖಾ ಕಾಲದ ಪ್ರಕಾರ ಆಟೋ ಚಾಲಕ ಸ್ವಲ್ಪ ಜಾಗರೂಕರಾಗಿದ್ದರೆ ಸದರಿ ಅಪಘಾತವನ್ನು ತಪ್ಪಿಸುವ ಸಾಧ್ಯತೆ ಇತ್ತು ಎಂದರೆ ಸರಿಯಲ್ಲ.

ಪೋಟೋವನ್ನು ನಮ್ಮ ಸಿಬ್ಬಂದಿಯಾದ ಮಾರುತಿ ಎಂಬುವವರು ನನ್ನ ಮೊಬೈಲ್ ಮೂಲಕ ತೆಗೆದಿರುತ್ತಾರೆ.

ಸದರಿ ಪೋಟೋಗಳನ್ನು ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಸಮಕ್ಷಮ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಗಾಯದ ಪ್ರಮಾಣಪತ್ರ ಹಾಗೂ ಇತರ ದಾಖಲೆಗಳನ್ನು ಹಾಗೂ ಐಎಂವಿ ವರದಿಯನ್ನು ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾವು ಸೃಷ್ಟಿ ಮಾಡಿದ ಪ್ರಕರಣಕ್ಕೆ ಪೂರಕವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಸಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿತನ ವಿರುದ್ಧ ಯಾವುದೆ ಆರೋಪ ಸಾಬೀತಾಗದೆ ಇದ್ದರೂ ಸಹಾ ದೊಡ್ಡ ವಾಹನ ಎಂಬ ಕಾರಣಕ್ಕೆ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೆ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ